**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 21.02.2026**

**ಮುಂದುವರಿದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ಎಸ್ ಅರ್ ವಕೀಲರಿಂದ**

ನಾನು ಮದುವೆಯಾದ ಸಂದರ್ಭದಲ್ಲಿ ನನ್ನ ಯಜಮಾನರು ಸರಕಾರಿ ನೌಕರಿಯಲ್ಲಿ ಇದ್ದರು . ನನ್ನ ಮತ್ತು ಎದುರುದಾರರ ಮದುವೆ ಇಷ್ಟಪಟ್ಟು ಆಗಿರುವ ಮದುವೆಯಾಗಿರುತ್ತದೆ . ಮದುವೆಯ ಸಂದರ್ಭದಲ್ಲಿ ನಮ್ಮ ಮತ್ತು ಎದುರುದಾರರ ಸಂಬಂಧಿಕರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ನಾನು ಎದುರುದಾರರನ್ನು ಮದುವೆಯಾಗುವ ಸಂದರ್ಭದಲ್ಲಿ ಅವರಿಗೆ ಯಾವುದೇ ಅನಾರೋಗ್ಯದ ಸಮಸ್ಯೆ ಇರುವುದಿಲ್ಲ. ಎದುರುದಾರರಿಗೆ ಮದುವೆಯ ಸಂದರ್ಭದಲ್ಲಿ ಯಾವುದೇ ದುಶ್ಚಟಗಳಿರುವುದಿಲ್ಲ. ನಾನು ಮತ್ತು ಎದುರುದಾರರು ಅವರವರ ಕುಟುಂಬದವರನ್ನು ಒಪ್ಪಿಸಿ ಮದುವೆಯಾಗಿರುತ್ತೇವೆ ಎಂದರೆ ಸರಿ . ಮದುವೆಯಾದ ನಂತರ ಎದುರುದಾರರ ಕುಟುಂಬದಲ್ಲೆ ವಾಸವಿರುತ್ತೇವೆ . ಒಟ್ಟು ಎದುರುದಾರರ ನಾಲ್ಕು ಜನ ಕುಟುಂಬದ ಸದಸ್ಯರೊಂದಿಗೆ ನಾನು ವಾಸವಿದ್ದೆ.

ನಾನು ಮತ್ತು ಎದುರುದಾರರು ಮದುವೆಯಾದ ನಂತರ ಸುಮಾರು 8 ರಿಂದ 9 ತಿಂಗಳು ಅನ್ಯೋನ್ಯವಾಗಿ ಜೀವನ ನಡೆಸಿರುತ್ತೇವೆ . ನಾನು ಡಿಪ್ಲೋಮದ ವರೆಗೆ ವ್ಯಾಸಂಗ ಮಾಡಿರುತ್ತೇನೆ . ನನ್ನ ವಿದ್ಯಾರ್ಹತೆಗೆ ತಕ್ಕಂತೆ ನಾನು ಯಾವುದೇ ಖಾಸಾಗಿ ಸಂಸ್ಥೆಯಲ್ಲಿ ಕೆಲಸ ಮಾಡಲು ಹೋಗಿರುವುದಿಲ್ಲ. ಎದುರುದಾರೊಂದಿಗೆ 9 ತಿಂಗಳು ಮಾಡಿದ ಸಂಸಾರದಲ್ಲಿ ನಾನು ಪ್ರೆಗ್ನೆಂಟ್ ಆಗಿರುವುದಿಲ್ಲ. ಎರಡನೇ ಅರ್ಜಿದಾರರ ಜನನ ನನ್ನ ತಾಯಿ ಮನೆಯಲ್ಲಿ ಆಗಿರುತ್ತದೆ . ಆ ಸಂದರ್ಭದಲ್ಲಿ ಎದುರುದಾರರು ಮಗುವಿನ

ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯು ಮಗುವಿನ ಯೋಗ ಕ್ಷೇಮವನ್ನು ನೋಡಿ ಕೊಳ್ಳುತ್ತಿದ್ದರು . ನಮ್ಮ ಕುಟುಂಬದಲ್ಲಿ ನಾನು ಮತ್ತು ನನ್ನ ಅಣ್ಣ ಮತ್ತು ಅತ್ತಿಗೆ ಇರುತ್ತೇವೆ . ನನ್ನ ಅಣ್ಣ ಸರಕಾರಿ ನೌಕರಿಯಲ್ಲಿ ಇದ್ದಾರೆ . ಎದುರುದಾರರ ಮನೆಯಿಂದ ಬಂದ ನಂತರ ನಾನು ನನ್ನ ತಂದೆ ತಾಯಿ ಮನೆಯಲ್ಲಿ ವಾಸವಿರುತ್ತೇನೆ . ನನ್ನ ತಂದೆ ತಾಯಿ ಮನೆಗೆ ಹೋದ ನಂತರ ಬಹಳ ಸಲ ನನ್ನ ಮತ್ತು ಎದುರುದಾರರ ಸಮಸ್ಯೆಗೆ ರಾಜಿ ತೀರ್ಮಾನ ಮಾಡಲಾಗಿರುತ್ತದೆ. ರುಧ್ರಾಪಟ್ಟಣದಲ್ಲಿ ಒಂದು ಬಾರಿ, ಗಂಗೂರಿನಲ್ಲಿ ಒಂದು ಬಾರಿ ರಾಜಿ ತೀರ್ಮಾನವಾಗಿರುತ್ತದೆ . ಸಾಕ್ಷಿಯು ಮುಂದುವರಿದು ಆಗಾಗ ಸಣ್ಣ ಪುಟ್ಟವಾಗಿ ರಾಜಿ ತೀರ್ಮಾನವಾಗುತ್ತಿತ್ತು ಎಂದು ನುಡಿದರು . ರಾಜಿ ತೀರ್ಮಾನವಾದ ನಂತರ ಸುಮಾರು ಬಾರಿ ನಾನು ಎದುರುದಾರರ ಮನೆಗೆ ಹೋಗಿರುತ್ತೇನೆ. ಪುನಃ ಅದೇ ರೀತಿ ಜಗಳವಾಗುತ್ತಿದ್ದರಿಂದ ನನ್ನ ತಂದೆಯ ಮನೆಗೆ ವಾಪಾಸ್ಸು ಬಂದಿರುತ್ತೇನೆ .

ಎದುರುದಾರರಿಂದ ತೊಂದರೆಗೆ ಒಳಗಾದ ನಂತರ ಮಹಿಳಾ ಸಹಾಯ ವಾಣಿಗೆ ಹೋಗಿ ಪುಕಾರು ನೀಡಿದ್ದೀರಾ ಎಂದರೆ ಸಾಕ್ಷಿಯು ಮಹಿಳಾ ಸಹಾಯವಾಣಿಗೆ ಹೋಗಿರುವುದಿಲ್ಲ ಎಂದು ನುಡಿದರು . ನನ್ನ ಅಣ್ಣ ಪೋಲಿಸ್ ಇಲಾಖೆಯಲ್ಲಿ ಪೋಲಿಸ್ ಪೇದೆಯಾಗಿ ಕೆಲಸ ಮಾಡುತ್ತಿರುತ್ತಾರೆ . ಮಗುವಿನ ಯೋಗ ಕ್ಷೇಮ ವಿಚಾರಿಸಲು ಎದುರುದಾರರು ಬಂದಿರುವುದಿಲ್ಲ. ನನ್ನ ಮತ್ತು ಎದುರುದಾರರ ಸಂಬಂಧ ಬಿರುಕು ಬಿಡಲು ಕಾರಣ ಎದುರುದಾರರು ಬೇರೊಂದು ಸಂಬಂಧ ಇಟ್ಟು ಕೊಂಡಿರುತ್ತಾರೆ . ರುದ್ರಪಟ್ಟಣದಲ್ಲಿ ಎದುರುದಾರರಿಗೆ ಅಕ್ರಮ ಸಂಬಂಧ ಇರುತ್ತದೆ ಅದನ್ನು ನಾನೇ ನೋಡಿರುತ್ತೇನೆ . ಈ ವಿಚಾರವನ್ನು ನಾನು ನನ್ನ ತಂದೆ ತಾಯಿ ಮತ್ತು ಎದುರುದಾರರ

ತಾಯಿಗೂ ಸಹ ತಿಳಿಸಿರುತ್ತೇನೆ . ಈ ವಿಚಾರವಾಗಿ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ನನ್ನ ಕುಟುಂಬಕ್ಕಿಂತ ಎದುರುದಾರರು ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಸರಿ . ಯಾವ ರೀತಿ ಎದುರುದಾರರು ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಸಾಕ್ಷಿಯು ಎದುರುದಾರರಿಗೆ ಅಡಿಕೆ ತೋಟ , ಒಂದು ನಿವೇಶನ ಮತ್ತು ಮನೆ ಇರುತ್ತದೆ ಮತ್ತು ಅವರಿಗೆ ಸರಕಾರಿ ಕೆಲಸ ಇರುತ್ತದೆ ಎಂದು ನುಡಿದರು .

ಎದುರುದಾರಿಗೆ ಸರಕಾರಿ ನೌಕರಿ ಹೊರತು ಪಡಿಸಿ ಬೇರೆ ಯಾವುದೇ ಸ್ಥಿರಾಸ್ತಿ ಮತ್ತು ಚರಾಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಸಂಬಂಧಪಟ್ಟ ಸ್ಥಿರಾಸ್ತಿ ಮತ್ತು ಚರಾಸ್ತಿಯ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ . ಸರಕಾರಿ ಸಂಬಳವನ್ನು ನಂಬಿಕೊಂಡು ಎದುರುದಾರರ ಎಷ್ಟು ಜನ ಸದಸ್ಯರು ಅವಲಂಭಿತರಾಗಿರುತ್ತಾರೆ ಎಂದರೆ ಸಾಕ್ಷಿಯು ಎದುರುದಾರರ ತಾಯಿ ಅವಲಂಭಿತರಾಗಿರುತ್ತಾರೆ ಎಂದು ನುಡಿಯುವರು . ಎದುರುದಾರರಿಗೆ ಅನಾರೋಗ್ಯದ ನಿಮಿತ್ತ ಶಸ್ತ್ರಚಿಕಿತ್ಸೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ತಿಂಗಳಿಗೆ ರೂ 20 ರಿಂದ 25 ಸಾವಿರ ಜೀವನಾಂಶ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ . ಎದುರುದಾರರು ತಿಂಗಳಿಗೆ ಎಷ್ಟು ಆದಾಯ ಗಳಿಸುತ್ತಾರೆ ಎಂದರೆ ಸಾಕ್ಷಿಯು ತಿಂಗಳಿಗೆ ರೂ 50 ರಿಂದ 55 ಸಾವಿರ ಇರಬಹುದು ಎಂದು ನುಡಿಯುವರು .

ಎದುರುದಾರರು ಅವರ ಹಾಗೂ ಕುಟುಂಬಕ್ಕಾಗಿ ಮತ್ತು ಅವರಿಗಾಗಿ ಎಷ್ಟು ಸಾಲ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎದುರುದಾರರಿಗೆ ಅವರ ಮತ್ತು ಕುಟುಂಬದ ಖರ್ಚನ್ನು ಕಳೆದು ರೂ 3 ಸಾವಿರ ಮಾತ್ರ ಉಳಿಯುತ್ತದೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ಜೊತೆ ಸಂಸಾರ ಮಾಡಲು ಈಗಲೂ ಇಷ್ಟ ಪಡುತ್ತಿದ್ದಾರೆ ನಾನೇ

ನಿರಾಕರಿಸುತ್ತಿದ್ದೇನೆ ಎಂದರೆ ಸಾಕ್ಷಿಯು ಹಾಗಿದ್ದಲ್ಲಿ ಎದುರುದಾರರು ವಿವಾಹ ವಿಚ್ಛೇದನೆಗಾಗಿ ಏಕೆ ಅರ್ಜಿ ಸಲ್ಲಿಸಿದ್ದಾರೆ ಎಂದು ಪ್ರಶ್ನಿಸಿದರು . ಎದುರುದಾರರು ಆ ರೀತಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರನ್ನು ಸ್ವ ಇಚ್ಛೆಯಿಂದ ತೊರೆದು ಈ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಂದ ಅಕ್ರಮ ಗಳಿಕೆ ಮಾಡಿ ಐಸಾರಾಮಿ ಜೀವನ ನಡೆಸಲು ಈ ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನನ್ನು ಸ್ವ ಇಚ್ಛೆಯಿಂದ ಬಿಟ್ಟು ಬಂದ ಕಾರಣ ನಾನು ಯಾವುದೇ ಜೀವಾನಂಶವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ